ದಿನಾಂಕಃ10.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು:- ಶ್ರೀ. ಕೆ ಎನ್ ಎಸ್ ವಕೀಲರಿಂದ ಪ್ರತಿವಾದಿ ಪರ**

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳು ಹೊರತುಪಡಿ ಬೆರೆ ಯಾವುದೇ ದಾಖಲು ನಾನು ದತ್ತು ಮಗಳೆಂದು ತೋರಿಸಲು ಇರುವುದಿಲ್ಲ ಎಂದರೆ ಸರಿಯಲ್ಲ. ನಾನೇ ಶರಾವತಿಯವರ ಮುಖಾಂತರ ನಾನು ಕೃಷ್ಣಮೂರ್ತಿಯವರ ದತ್ತು ಮಗಳು ಮತ್ತು ಅರ್ಧ ಹಿಸ್ಸೆ ನೀಡಬೇಕೆಂದು ವಿಭಾಗ ಕೋರಿ ದಾವೆಯನ್ನು ಸಲ್ಲಿಸಿದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಸಹೋದರ ಮಾವ ಅಧಿಕಾರ ಪತ್ರ ಪಡೆದುಕೊಂಡು ಸಾಕ್ಷಿ ನುಡಿಯಲು ಅಧಿಕಾರಿ ನೀಡುರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಗ ನಾನು ಅಪ್ರಾಪ್ತ ವಯಸ್ಸಾಗಿರುತ್ತೆನೆ ಎನ್ನುವರು. ನನ್ನ ಸಹೋದರ ಮಾವ ನಾನು ದತ್ತು ಮಗಳು ಎಂದು ಹೇಳಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಹಿಸ್ಸೆ ಪತ್ರ ಮತ್ತು ನೊಂದಾಯಿತ ದತ್ತು ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ವಾಪಸ್ಸು ಪಡೆದಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ದತ್ತು ತಂದೆ ಪ್ರತಿವಾದಿ ಎಂದರೆ ಸರಿ. ನನ್ನ ದತ್ತು ತಂದೆ ನಮ್ಮ ಮನೆಗೆ ಬಂದು ನನ್ನೊಂದಿಗೆ ರಾಜಿ ಮಾಡಿಕೊಂಡು ಮಗಳೆಂದು ಒಪ್ಪಿಕೊಂಡು ನಮ್ಮೊಂದಿಗೆ ವಾಸ ಮಾಡಲು ಪ್ರಾರಂಬಿಸಿರುತ್ತಾರೆ ಆ ಕಾರಣ ದಾವೆಯನ್ನು ಹಿಂಪಡೆಯುತ್ತೇನೆ ಎನ್ನುವರು. ಸದರಿ ಸಮಯದಲ್ಲೂ ಸಹ ಹಿಸ್ಸೆ ಪತ್ರ ಮತ್ತು ನೊಂದಾಯಿತ ದತ್ತು ಪತ್ರ ಹಾಜರುಪಡಿಸಿರುವುದಿಲ್ಲ ಎಂದರೆ ಗೊತ್ತಿಲ್ಲ ಎನ್ನುವರು.

2001 ನೇ ಇಸವಿಯಲ್ಲಿ ನನಗೆ 6 ವರುಷ. ಆಗ ನನಗೆ ಹೆಚ್ಚಿನ ತಿಳುವಳಿಕೆ ಇರಲಿಲ್ಲ ಎಂದರೆ ಸಾಕ್ಷಿ ಒಂದು ಮಗುವಿಗೆ ಎಷ್ಟು ತಿಳುವಳಿಕೆ ಎಷ್ಟ ಎನ್ನುವರು.

ದತ್ತು ತಂದೆಗೆ ಇಬ್ಬರೂ ಸಹೋದರರು ಮತ್ತು ಒಬ್ಬ ಸಹೋದರಿಯವರು ಎನ್ನುವರು. ನನ್ನ ಹೆತ್ತ ತಂದೆ ತಾಯಿಯವರು ಮದುವೆ 1993 ರಲ್ಲಿ ಆಗಿದೆ ಎನ್ನುವರು. ನನ್ನ ಹೆತ್ತ ತಂದೆ ಮೂಲತಹ ಊರು ತಳನೆರಿ ಕರೂರು ಹೋಬಳಿ ಎನ್ನುವರು. ನನ್ನ ಹೆತ್ತ ತಾಯಿ ಹೆಸರು ಸಾವಿತ್ರಿ ಆಗಿರುತ್ತದೆ. ಆಕೆ ನನ್ನ ದತ್ತು ತಾಯಿಯ ಸ್ವಂತ ತಂಗಿ ಎಂದರೆ ಸರಿ. ದತ್ತು ತಂದೆರವರಿಂದ ನನ್ನ ತಾಯಿ ವಿವಾಹದ ಪೂರ್ವದಲ್ಲಿ 20 ಗುಂಟೆ ಜಮೀನನ್ನು ವ್ಯವಸ್ಥಾಪದ ಮುಖಾಂತರ ಪಡೆದಿರುತ್ತಾರೆ ಎಂದರೆಸರಿ. ಆ ಸಂದರ್ಭದಲ್ಲಿ ಬೆರೆ ಆಸ್ತಿಗಳು ನನ್ನ ತಾಯಿಗೆ ನೀಡಿದಾಗ ಆ 20 ಗುಂಟೆ ಜಮಿನು ವಾಪಸ್ಸು ನೀಡಬೇಕೆಂದು ಮಾತುಕತೆ ಆಗಿದೆ ಎಂದರೆ ಸರಿಯಲ್ಲ. ಸದರಿ ಮಾತುಕತೆಯಂತೆ ನನ್ನ ತಾಯಿ ವಿರುದ್ಧ ಕೃಷ್ಣಮೂರ್ತಿಯವರು ಒಂದು ದಾವೆ ಸಲ್ಲಿಸಿರುತ್ತಾರೆ ಎಂದರೆ ಗೊತ್ತಿಲ್ಲ ಎನ್ನುವರು. ಸದರಿ ಕೃಷ್ಣಮೂರ್ತಿಯವರ ಮನೆಯಲ್ಲಿ ನನ್ನ ಜನಕ ತಂದೆ ತಾಯಿ ಮತ್ತು ತಂಗಿಯೊಂದಿಗೆ ವಾಸ ಮಾಡುತ್ತಿದ್ದೇವೆ ಎಂದರೆಸರಿ. ಸಾಕ್ಷಿ ಮುಂದುವರೆದು ನಾವು ಒಟ್ಟಿ ಕೃಷ್ಣಮೂರ್ತಿಯಿವರು ಮನೆಯಲ್ಲಿ ಮಾಡುತ್ತಿದ್ದೆವು ಎನ್ನುವರು. ಸದರಿ ಮನೆ ನಾವು ಖಾಲಿ ಮಾಡಬೆಕೆಂದು ಕೃಷ್ಣಮೂರ್ತಿರವರು ಒಂದು ದಾವೆ ಹೂಡಿರುತ್ತಾರೇ ಎಂದರೆ

ಗೊತ್ತಿಲ್ಲ ಎನ್ನುವರು. ಕೃಷ್ಣಮೂರ್ತಿಯವರಿಗೆ ಅವರಪಾಲಿಗೆ ಬಂದ ಹಿಸ್ಸೆಯನ್ನು ಎಂದಿಗೂ ನನಗೆ ಅಥವಾ ನನ್ನ ತಾಯಿಗೆ ಕೊಡಲು ಇಚ್ಛೆ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿ ಪಾಲ ನೀಡಿದರೆ ಮಾತ್ರ ಭಾಸ್ಕರ ಭಟ್ಟರವರನ್ನು ಮದುವೆ ಮಾಡುತ್ತೇನೆ ಎಂದು ಹೇಳಿ ಕೃಷ್ಣಮೂರ್ತಿಯವರ ಮೇಲೆ ಒತ್ತಡ ಹೇರಿದ ಕಾರಣ ಆತ ವಿಧಿಇಲ್ಲದೇ ವ್ಯವಸ್ಥಾಪಕರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಮತ್ತು ವಿಭಾಗ ದಾವೆಯ ವಾದಪತ್ರವನ್ನು ನೋಡಿರುತ್ತೇನೆ. ನನ್ನ ತಾಯಿ ಮುಖಾಂತರ ಕೃಷ್ಣಮೂರ್ತಿರವರ ವಿರುದ್ಧ ಜೀವನಾಂಶಕೋರಿ ಒಂದು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಅದನ್ನು ಸಹ ಹಿಂದಕ್ಕೆ ಪಡೆದಿರುತ್ತೇನೆ ಎಂದರೆ ಸರಿ. ಕೃಷ್ಣಮೂರ್ತಿರವರು ಮನೆ ಖಾಲಿ ಮಾಡಲು ಸಲ್ಲಿಸಿದ ದಾವೆ ಇನ್ನು ನಡೆಯುತ್ತಿದೆ ಎಂದರೆ ಸಾಕ್ಷಿ ಅದು ಮುಕ್ತಾಯ ಆಗಿರಬಹುದು ಎನ್ನುವರು. ಸದರಿ ಮೇಲೆ ಹೇಳಿದ ಎರಡು ದಾವೆಯಗಳು ಸಲ್ಲಿಸಿದ ಪೂರ್ವದಲ್ಲಿ ನೊಂದಣಿ ಆಗದ ದತ್ತು ಪತ್ರವನ್ನು ಎಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ತಕರಾರು ಮಾಡಿದ ಕಾರಣ ಲಿಖಿತ ಹೇಳಿಕೆ ಸಮಯದಲ್ಲಿ ಹಾಜರುಪಡಿಸಿರುತ್ತೇನೆ ಎನ್ನುವರು. ಅದನ್ನು ಸೃಷ್ಟಿ ಮಾಡಿ ಈ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ದತ್ತು ಪಡೆಯಲು ಯಾವುದೇ ಕಾರ್ಯಕ್ರಮ ಆಗಿರುವುದಿಲ್ಲ ಎಂದರೆ ಸರಿ. ಹರೆಗೊಪ್ಪದಲ್ಲಿ ಸುಮಾರು 30 ಬ್ರಹ್ಮಣ ಮನೆಗಳಿರುತ್ತದೆ ಎಂದರೆಸರಿ. ಅದರಲ್ಲಿ ಕೃಷ್ಣಮೂರ್ತಿರವರ ಕುಟುಂಬದ 3 ಮನೆಗಳಿರುತ್ತವೆ ಎಂದರೆಸರಿ. ಎಲ್ಲಾ ಮನೆಗಳು ಒಂದೇ ಬೀದಿಯಲ್ಲಿ ಇರುತ್ತದೆ ಎಂದರೆಸರಿ. ಏನಾದರೂ ಕಾರ್ಯಕ್ರಮ ಆದರೆ ಎಲ್ಲರನ್ನು ಕರೆಯುತ್ತಾರೆ ಎಂದರೆಸರಿ. ದತ್ತು ನೀಡುವ ಸಮಯದಲ್ಲಿ ಧಾರ್ಮಿಕ ಪೂಜೆ ಮಾಡಿರುತ್ತಾರೆ ಮತ್ತು ಇಬ್ಬರ ಕಡೆ ಪೋಷಕರು ಹಾಜರಿರಬೇಕು ಎನ್ನುವರು. ನನ್ನ ತಂದೆ ಅಣ್ಣ ದೊಡ್ಡ ಪೂರೈತರು ಮತ್ತು ಜ್ಯೂತೀಶರು ಎಂದರೆಸರಿ. ನಮ್ಮ ಕುಟುಂಬದಲ್ಲಿ ಎಲ್ಲರು ವಿದ್ಯಾವಂತರು ಎಂದರೆಸರಿ. ಏನಾದರೂ ಕಾರ್ಯಕ್ರಮ ಆದರೆ ಕೃಷ್ಣಮೂರ್ತಿಯ ಸಹೋದರ ಸಹೋದರಿಯರಿಗೋ ಸಹ ಮಾಹಿತಿ ಇರುತ್ತದೆ ಎಂದರೆಸರಿ. ಅವರೆಲ್ಲರು ಅನೊನ್ಯವಾಗಿದ್ದರು ಎಂದರೆಸರಿ. ಕೃಷ್ಣಮೂರ್ತಿರವರು ಹೆಚ್ಚಾಗಿ ಚಂದ್ರಶೇಖರರವರೊಂದಿಗೆ ಒಳನಾಟ ಹೊಂದಿದ್ದರೆ ಎಂದರೆ ಸಾಕ್ಷಿ 2008 ನೇ ಇಸಯಲ್ಲಿ ಅವರೊಂದಿಗೆ ಒಳನಾಟ ನಡೆಸಿದರು ಎನ್ನುವರು. ವಿಭಾಗ ಆದ ನಂತರ ಕೃಷ್ಣಮೂರ್ತಿ ಮತ್ತು ತಾಯಿ ಒಟ್ಟಾಗಿ ದ್ದರು ಎಂದರೆಸರಿ. ಕೃಷ್ಣಮೂರ್ತಿ ಮತ್ತು ಅವರ ಸಹೋದರ ಸಹೋದರಿಯ ವಿರುದ್ಧ ಯಾವುದೇ ವ್ಯಮನಸ್ಸು ಇರುವುದಿಲ್ಲ ಎಂದರೆಸರಿ. ಅವರು ಬಂದ ಆಸ್ತಿಯನ್ನು ಅವರೇ ನೊಡಿಕೊಳ್ಳುತ್ತಿದ್ದರು ಮತ್ತು ಲೆಕ್ಕಪತ್ರ ಅವರೇ ಇಡುವವರು ಎನ್ನುವರು. ಅವರ ಬಳಿ ಇದ್ದ ಬಂಗಾರ ಬೆಳ್ಳಿ ಒಂದು ಪಟ್ಟಿ ಇದ್ದು ಅದುನನ್ನ ಬಳಿ ಇರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಸದರಿ ಬಂಗಾರ ಬೆಳ್ಳಿಯನ್ನು ಗಿರುವು ಇಟಿದ್ದರು ಎಂದರೆಸರಿಯಲ್ಲ. ನನ್ನ ಜನಕ ತಂದೆ ಅಡಿಕೆ ಫಸಲನ್ನು ತೆಗೆದಿರುತ್ತಾರೆ ಎಂದು ಹೇಳಿ ಕೃಷ್ಣಮೂರ್ತಿರವರು ದೂರು ನೀಡಿರುತ್ತಾರೆ ಎಂದರೆಸರಿ. ಅದು ಬಲವಂತವಾಗಿ

ಕೊಡಿಸಿರುತ್ತಾರೆ ಎನ್ನುವರು. ಪೊಲಿಸರು ಸದರಿ ಅಡಿಕೆಯನ್ನು ಜಪ್ತಿ ಮಾಡಿ ಕೃಷ್ಣಮೂರ್ತಿರವರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿ ಪೊಲೀಸರು ಬಲವಂತವಾಗಿ ತೆಗೆದುಕೊಂಡಿರುತ್ತಾರೆ ಎನ್ನುವರು. ದಿಃ 18.05.2001 ರ ದತ್ತು ಪತ್ರ ನಕಲಿ ದಾಖಲೆ ಎಂದು ಹೇಳಿ ಕೃಷ್ಣಮೂರ್ತಿಯವರು ದೂರು ನೀಡಿರುತ್ತಾರೆ ಎಂದರೆಸರಿ. ಸಾಕ್ಷಿ ಮುಂದುವರೆದು ಬಲವಂತವಾಗಿ ದೂರು ನೀಡುತ್ತಾರೆ ಎನ್ನುವರು. ಆ ದೂರುಗಳ ಬಗ್ಗೆ ಪೊಲಿಸರು ನನ್ನ ಜನಕ ತಂದೆ ತಾಯಿಗೆ ವಿಚಾರಣೆ ಮಾಡಿರುತ್ತಾರೆ ಎನ್ನುವರು. ನಾನು ವಯಸ್ಸಿಗೆ ಬಂದ ನಂತರ ಅವರ ಬಳಿ ಕೇಳಿ ತೆಗೆದುಕೊಂಡಿರುತ್ತೇನೆ ಎನ್ನುವರು. ಹಿಸ್ಸೆ ಪತ್ರ, ನೊಂದಣಿ ಆಗದ ದತ್ತು ಪತ್ರ ಅಥವಾ ನೊಂದಣಿ ದತ್ತು ಪತ್ರ ಎಂದಿಗೂ ಕೃಷ್ಣಮೂರ್ತಿಯವರು ಬರೆದುಕೊಟ್ಟಿಲ್ಲ ಎಂದರೆಸರಿಯಲ್ಲ. ಕೃಷ್ಣಮೂರ್ತಿಯವರು ನೀಡಿದ ಬಗ್ಗೆ ಯಾವ ದಾಖಲೆ ಇಲ್ಲ ಎಂದರೆಸರಿ. ಸಾಕ್ಷಿ ನಾವು ನೀಡಿರುತ್ತೇವೆ ಎನ್ನುವರು. ತಹಶೀಲ್ದಾರರವರಿಗೆ ಕೃಷ್ಣಮೂರ್ತಿಯವರು ದತ್ತು ಪತ್ರ ಮತ್ತು ಹಿಸ್ಸೆ ಪತ್ರ ಮೇಲೆ ಖಾತೆ ಮಾಡಬಾರದೆಂದು ಹೇಳಿ ತಕರಾರು ನೀಡುತ್ತಾರೆ ಎಂದರೆ ಸರಿಯಲ್ಲ. ನೊಂದಣಿ ಆದ ಕಾರಣ ನನ್ನ ಹೆಸರಿಗೆ ಖಾತೆ ವರ್ಗಾವಣೆ ಮಾಡಿರುತ್ತಾರೆ ಹೋರೆತು ಅದರ ನಿಜ ಅಂಶ ಬಗ್ಗೆ ತನಿಖೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ